**<u>ಕರ್ನಾಟಕ ಸರ್ಕಾರ</u>**

ಸಂಖ್ಯೆ: ಕಂಇ/515/ಟಿಎನ್‌ಆರ್/ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:17.10.2020.

**ಇಂದ,**
**ಸರ್ಕಾರದ ಪ್ರಧಾನ ಕಾರ್ಯದರ್ಶಿ,**
ಕಂದಾಯ ಇಲಾಖೆ (ವಿನಿ, ಭೂಮಿ ಮತ್ತು ಯುಪಿಓಆರ್),
ಬಹುಮಹಡಿ ಕಟ್ಟಡ,
ಬೆಂಗಳೂರು.

**ಇವರಿಗೆ,**
**ಜಿಲ್ಲಾಧಿಕಾರಿಗಳು,**
ಕಲಬುರಗಿ, ಯಾದಗಿರಿ, ರಾಯಚೂರು, ವಿಜಯಪುರ, ಬೆಳಗಾವಿ, ಬಾಗಲಕೋಟೆ,
ಬೀದರ್, ಕೊಪ್ಪಳ, ಗದಗ, ಬಳ್ಳಾರಿ,ಧಾರವಾಡ ಹಾಗೂ ಹಾವೇರಿ ಜಿಲ್ಲೆಗಳು.

ಮಾನ್ಯರೇ,

**ವಿಷಯ :** "ಕಾಳಜಿ ಕೇಂದ್ರ"ಗಳಲ್ಲಿ ಪೌಷ್ಠಿಕ ಆಹಾರವನ್ನು ನೀಡುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಹಾ ಮಳೆಯಿಂದಾಗಿ ಉತ್ತರ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಅತಿವೃಷ್ಟಿ ಮತ್ತು ಪ್ರವಾಹ ಉಂಟಾಗಿರುತ್ತದೆ. ಪ್ರವಾಹದಿಂದಾಗಿ ಬೆಳೆ ಹಾನಿ, ಮನೆ ಹಾನಿ, ಜೀವ ಹಾನಿ ಮತ್ತು ಪ್ರಾಣಿ ಹಾನಿಯಾಗಿದೆ. ಇದರಿಂದಾಗಿ ಜನರು ತೀವ್ರ ಸಂಕಷ್ಟ ಪರಿಸ್ಥಿತಿಯಲ್ಲಿರುತ್ತಾರೆ. ಮನೆಗಳನ್ನು ಕಳೆದುಕೊಂಡ ಸಂತ್ರಸ್ಥರಿಗೆ ತಕ್ಷಣವೇ ಆಶ್ರಯ ನೀಡಲು "ಕಾಳಜಿ ಕೇಂದ್ರ"ಗಳನ್ನು ತೆರೆಯಲಾಗಿರುತ್ತದೆ.

ಈ "ಕಾಳಜಿ ಕೇಂದ್ರ"ಗಳಲ್ಲಿನ ಸಂತ್ರಸ್ಥರಿಗೆ ಎಲ್ಲಾ ಅಗತ್ಯ ಸೌಲಭ್ಯಗಳನ್ನು ಒದಗಿಸುವುದು ಹಾಗೂ ಪೌಷ್ಠಿಕ ಆಹಾರವನ್ನು ಈ ಪತ್ರದೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿ ತಿಳಿಸಿರುವಂತೆ ನೀಡುವ ಬಗ್ಗೆ, ಹಾಗೂ "ಕಾಳಜಿ ಕೇಂದ್ರ"ಗಳಲ್ಲಿನ ಆಶ್ರಿತರಿಗೆ ಕೋವಿಡ್-19 ಸೋಂಕು ಹರಡದಂತೆ ಮಾಸ್ಕ್ ಧರಿಸುವಿಕೆ, ಸಾಮಾಜಿಕ ಅಂತರ ಕಾಪಾಡುವುದು, ಸಾಬೂನಿನಿಂದ ಕೈತೊಳೆಯುವುದಕ್ಕೆ ಸೂಕ್ತ ವ್ಯವಸ್ಥೆ ಮಾಡುವುದು, ಸ್ಯಾನಿಟೈಜರ್ ವ್ಯವಸ್ಥೆ ಮಾಡುವುದು, ಥರ್ಮಲ್ ಸ್ಕ್ರೀನಿಂಗ್, ಶೌಚಾಲಯವನ್ನು ಸ್ವಚ್ಛವಾಗಿರಿಸುವುದು ಹಾಗೂ "ಕಾಳಜಿ ಕೇಂದ್ರ"ಗಳಲ್ಲಿರುವ ಸಂತ್ರಸ್ಥರಿಗೆ ಅನಾರೋಗ್ಯ(ಕೆಮ್ಮು, ನೆಗಡಿ, ಜ್ವರ) ಕಂಡು ಬಂದ ತಕ್ಷಣವೇ ಅವರಿಗೆ ಸೂಕ್ತ ಪ್ರಾಥಮಿಕ ವೈದ್ಯಕೀಯ ಚಿಕಿತ್ಸೆ ನೀಡುವುದು, ಒಂದು ವೇಳೆ, ಕೋವಿಡ್-19 ಸೋಂಕು ಇದೆ ಎಂದು ಪತ್ತೆಯಾದಲ್ಲಿ ಅವರನ್ನು ಸರ್ಕಾರದ ಆದೇಶ/ಸೂಚನೆಗಳಂತೆ ತಕ್ಷಣವೇ ಆಸ್ಪತ್ರೆಗೆ ದಾಖಲಿಸಿ ಸೂಕ್ತ ವೈದ್ಯಕೀಯ ಚಿಕಿತ್ಸೆಯನ್ನು ನೀಡುವ ಬಗ್ಗೆ ಕಡ್ಡಾಯವಾಗಿ ಅಗತ್ಯ ಕ್ರಮ ಕೈಗೊಳ್ಳುವಂತೆ ಹಾಗೂ ಈ ಕ್ರಮಗಳಲ್ಲಿ ಯಾವುದೇ ಲೋಪದೋಷಗಳು ಉಂಟಾಗದಂತೆ ಎಚ್ಚರ ವಹಿಸುವಂತೆ ತಮ್ಮನ್ನು ಕೋರಲು ನಿರ್ದೇಶಿಸಲ್ಪಟ್ಟಿದ್ದೇನೆ:

ತಮ್ಮ ನಂಬುಗೆಯ,

17/10/2020

**(ಕೆ. ಉಮಾಪತಿ)**
ಸರ್ಕಾರದ ಜಂಟಿ ಕಾರ್ಯದರ್ಶಿ
ಕಂದಾಯ ಇಲಾಖೆ
(ವಿಪತ್ತು ನಿರ್ವಹಣೆ ಮತ್ತು ನೋಂ&ಮು)

## ಅನುಬಂಧ
## "ಕಾಳಜಿ ಕೇಂದ್ರ"ಗಳಲ್ಲಿ ಒದಗಿಸಬೇಕಾಗಿರುವ ಪೌಷ್ಟಿಕ ಆಹಾರ ಪಟ್ಟಿ

| | |
|---|---|
| ಬೆಳಗಿನ ಉಪಹಾರ | ಅವಲಕ್ಕಿ ಒಗ್ಗರಣೆ,<br>ಉಪ್ಪಿಟ್ಟು ಮತ್ತು ಶಿರಾ<br>ಚಿತ್ರನ್ನ<br>ಇಡ್ಲಿ/ದೋಸೆ<br>ಕಾಫೀ/ಟೀ/ಹಾಲು |
| ಮಧ್ಯಾಹ್ನ ಊಟ | ಜೋಳದ ರೊಟ್ಟಿ/ಚಪಾತಿ<br>ತರಕಾರಿ ಪಲ್ಯ/ಕಾಳು ಪಲ್ಯ<br>ಅನ್ನ ಸಾಂಬಾರ್<br>ಮೊಸರು ಮತ್ತು ಚಟ್ನಿಪುಡಿ<br>ಮೊಟ್ಟೆ ಮತ್ತು ಬಾಳೆಹಣ್ಣು |
| ಸಾಯಂಕಾಲ ತಿಂಡಿ | ಮಂಡಕ್ಕಿ ಚುರುಮುರಿ ಮತ್ತು ಮಿರ್ಚಿ<br>ಬಿಸ್ಕತ್ / ಬನ್<br>ಕಾಫೀ/ಟೀ/ಹಾಲು |
| ರಾತ್ರಿ ಊಟ | ಜೋಳದ ರೊಟ್ಟಿ/ಚಪಾತಿ<br>ತರಕಾರಿ ಪಲ್ಯ/ಕಾಳು ಪಲ್ಯ<br>ಅನ್ನ ಸಾಂಬಾರ್<br>ಮೊಸರು ಮತ್ತು ಚಟ್ನಿಪುಡಿ<br>ಮೊಟ್ಟೆ ಮತ್ತು ಬಾಳೆಹಣ್ಣು |

- "ಕಾಳಜಿ ಕೇಂದ್ರ"ದಲ್ಲಿನ ಸಂತ್ರಸ್ಥರಿಗೆ ಪ್ರತಿದಿನವೂ ಸಮಯಕ್ಕೆ ಸರಿಯಾಗಿ ಮೇಲಿನಂತೆ ಆಹಾರವನ್ನು ನೀಡುವುದು
- ಋತುಮಾನದ ತರಕಾರಿಗಳನ್ನು ಆದಷ್ಟು ಹೆಚ್ಚಿಗೆ ಬಳಸುವುದು.
- ವಯೋವೃದ್ಧರಿಗೆ, ಗರ್ಭಿಣಿಯರಿಗೆ ಮತ್ತು ಮಕ್ಕಳಿಗೆ ವಿಶೇಷ ಕಾಳಜಿ ವಹಿಸುವುದು.
- ಅಡಿಗೆ ಮಾಡುವಾಗ ಮತ್ತು ಆಹಾರವನ್ನು ಬಡಿಸುವಾಗ ಸ್ವಚ್ಛತೆ ಮತ್ತು ನೈರ್ಮಲ್ಯವನ್ನು ಕಾಪಾಡುವುದು.
- "ಕಾಳಜಿ ಕೇಂದ್ರ"ಗಳಲ್ಲಿ ಪೌಷ್ಟಿಕ ಮತ್ತು ಸಮತೋಲಿತ ಆಹಾರವನ್ನು ನೀಡುವುದು ಮುಖ್ಯ ಉದ್ದೇಶವಾಗಿರತಕ್ಕದ್ದು.
- ಈ ಕಾರ್ಯದಲ್ಲಿ ಯಾವುದೇ ದುರುಪಯೋಗವಾಗದಂತೆ ಎಚ್ಚರವಹಿಸುವುದು.

17/10/2020

**(ಕೆ. ಉಮಾಪತಿ)**
ಸರ್ಕಾರದ ಜಂಟಿ ಕಾರ್ಯದರ್ಶಿ
ಕಂದಾಯ ಇಲಾಖೆ
(ವಿಪತ್ತು ನಿರ್ವಹಣೆ ಮತ್ತು ನೋಂ&ಮು)